**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

**ಹುಕ್ಕೇರಿ**

**ಸಿಸಿ ನಂ ಃ 186/2021**
**ಸಿಡಬ್ಲು ಃ 11**
**ಪಿಡಬ್ಲು ಃ 7**

**ಹೆಸರು** ಃಸದಾಶಿವ ರೇವಪ್ಪಾ ಕಟ್ಟೀಮನಿ
ತಂದೆ ಹೆಸರು ಃ ರೇವಪ್ಪಾ ಕಟ್ಟೀಮನಿ
**ವಯಾ** ಃ **52** ವರ್ಷ
**ಉದ್ಯೋಗ** ಃ ಎ ಸಿ ಪಿ ಅಪರಾಧ ವಿಭಾಗ ಬೆಳಗಾವಿ
**ವಾಸ** ಃ ಬೆಳಗಾವಿ

**(ದಿನಾಂಕಃ 23-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**
**ಮುಖ್ಯ ವಿಚಾರಣೆ : ಸಸಅಃರವರಿಂದ** ಸರಕಾರದ ಪರವಾಗಿ ಃ

**1.** ನಾನು **05-10-2013** ರಿಂದ **14-05-2015** ರ ವರೆಗೆ ನಾನು ಪಿ ಐ ಅಲಾನಿ ದಳ ಗೋಕಾಕ ಎಂದು ಕರ್ತವ್ಯ ಮಾಡಿರುತ್ತೇನೆ.

**2.** ದಿನಾಂಕ ದಿಃ**27-07-2014** ರಂದು ಸದರಿ ಪ್ರಕರಣದ ತನಿಖೆಯನ್ನು ಚಾಸಾ-**10** ರವರಿಂದ ವಹಿಸಿಕೊಂಡಿರುತ್ತೇನೆ. ಅದೇ ದಿನ ದಾಳಿಯಲ್ಲಿ ಭಾಗವಹಿಸಿದ ಚಾಸಾ-**4** ರಿಂದ **6** ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ**11-8-2014** ರಂದು ಆರೋಪಿಯನ್ನು ಹಿಡಿದುಕೊಂಡು ಬರಲು ಚಾಸಾ-**4**ರವರಿಗೆ ಮೆಮೋ ಕೊಟ್ಟಿರುತ್ತೇನೆ. ಚಾಸಾ-**4**ರವರು ಆ ಪ್ರಕರಣದಲ್ಲಿರುವ ಆರೋಪಿತರನ್ನು ತಪಾಸಣೆ ಮಾಡಿ ಅವರು ಸಿಕ್ಕಿರುವದಿಲ್ಲ ಎಂದು ವರದಿ ಮಾಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ **12-08-2014** ರಂದು ಎಚ್ ಸಿ ಖೋತರವರ ಮುಖಾಂತರ ಈ ಪ್ರಕರಣದಲ್ಲಿ ಜಪ್ತಾದಂತಹ ಶ್ಯಾಂಪಲ ಮಾಲನ್ನು ಎಫ್ ಎಸ್ ಎಲ್ ಬೆಂಗಳೂರು ಇವರಿಗೆ ಡಿ ವೈ ಎಸ್ ಪಿ ಇವರ ಅನುಮತಿಯನ್ನು ಪಡೆದು ಕಳುಹಿಸಿರುತ್ತೇನೆ. ದಿಃ **14-08-2014** ರಂದು ಎಚ್ ಸಿ ಖೋತ ಇವರು ಶ್ಯಾಂಪಲನ್ನು ಒಪ್ಪಿಸಿದ ಬಗ್ಗೆ ವರದಿ ಕೊಟ್ಟಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ **27-8-2014** ರಂದು ಚಾಸಾ-**6** ರವರಿಗೆ ಆರೋಪಿಯನ್ನು ಹಿಡಿದುಕೊಂಡು ಬರಲು ಜ್ಞಾಪನ ಪತ್ರವನ್ನು ನೀಡಿರುತ್ತೇನೆ. ದಿಃ **20-8-2014** ರಂದು ಚಾಸಾ-**5** ರವರಿಗೂ ಸಹ ಆರೋಪಿಯನ್ನು ಹಿಡಿದುಕೊಂಡು ಬರಲು ಜ್ಞಾಪನ ಪತ್ರವನ್ನು ನೀಡಿರುತ್ತೇನೆ. ದಿಃ **24-08-2014** ರಂದು ಚಾಸಾ-**5**ರವರು ಆರೋಪಿ ಪತ್ತೆ ಆಗಿಲ್ಲ

ಎಂದು ವರದಿ ಕೊಟ್ಟಿರುತ್ತಾರೆ. ಅದೇ ರೀತಿ ಚಾಸಾ-6ರವರಿಗೂ ಸಹ ಆರೋಪಿಯನ್ನು ಪತ್ತೆ ಮಾಡಲು ಮೆಮೋವನ್ನು ಕೊಟ್ಟಿರುತ್ತೇನೆ ಹಾಗೂ ಅವರು ಆರೋಪಿ ಪತ್ತೆ ಆಗಿಲ್ಲ ಎಂದು ಮೆಮೋವನ್ನು ಕೊಟ್ಟಿರುತ್ತಾರೆ. ದಿಃ **18-8-2014** ರಂದು ಎಫ್ ಎಸ್ ಎಲ್ ಗೆ ಕಳುಹಿಸಿದ ಮಾಲನ್ನು ಹೊರತು ಪಡಿಸಿ, ಉಳಿದಂತಹ ಕಳ್ಳಭಟ್ಟಿ ಸರಾಯಿಯನ್ನು ಡೆಪ್ಯೂಟಿ ಕಮೀಷನರ ಆಫ್ ಎಕ್ಸೈಜ ಬೆಳಗಾವಿ ಇವರ ಆದೇಶದ ಅನ್ವಯ ಅಬಕಾರಿ ನೀರಿಕ್ಷಕರು ಹುಕ್ಕೇರಿ ಇವರಿಗೆ ಹಸ್ತಾಂತರಿಸಿರುತ್ತೇನೆ. ಎಫ ಎಸ್ ಎಲ್ ಗೆ ಹೋದಂತಹ ಪೊಲೀಸ ಪೇದೆ ವಾಪಸ ಬಂದು ನಮ್ಮ ಮುಂದೆ ಸ್ವೀಕೃತಿ ಪತ್ರ ಮತ್ತು ವರದಿಯನ್ನು ಕೊಟ್ಟಿರುತ್ತಾರೆ. ದಿಃ **26-8-2014** ರಂದು ಎಫ್ ಎಸ್ ಎಲ್ ವರದಿ ಬಂದಿದ್ದು ಅದನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿಃ**30-08-2014** ರಂದು ಡಿ ವೈ ಎಸ್ ಪಿ ಬೆಳಗಾವಿ ಇವರಲ್ಲಿಗೆ ಕಲಂ **328** ಐ ಪಿ ಸಿ ಕೈ ಬಿಡಲು ಅನುಮತಿ ಪಡೆದುಕೊಂಡಿರುತ್ತೇನೆ. ದಿಃ **30-08-2014** ರಂದು ಅಬಕಾರಿ ನೀರಿಕ್ಷಕರಿಗೆ ಮುದ್ದೆಮಾಲನ್ನು ಒಪ್ಪಿಸಿದ ಬಗ್ಗೆ ವರದಿ ಕೊಟ್ಟಿದ್ದು, ಪಿಸಿ-**2294** ಆರ್ ಎಸ್ ಕೋಳಿ ಇವರು ವರದಿ ಕೊಟ್ಟದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ತನಿಖೆ ಪೂರ್ಣ ಆದ ನಂತರ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಶ್ಯಾಂಪಲಗೆ ತೆಗೆದಂತಹ ಮುದ್ದೆ ಮಾಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದು ಈಗಾಗಲೆ ಎಂ ಒ **-1** ಮತ್ತು **2** ಈಗಾಗಲೇ ಗುರುತಿಸಲಾಗಿದೆ. ಎಂ ಎನ್ ಪೂಜರಿ ಇವರಿಗೆ ಕೊಟ್ಟಂತಹ ಮೇಮೋ ನೋಡಿ ಗುರುತಿಸಿದ್ದು ಅದನ್ನು ನಿಪಿ-**10** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**10**(ಎ) ಎಂದು ಗುರುತಿಸಲಾಯಿತು. ಎಂ ಎನ್ ಪೂಜಾರಿ ಇವರು ಕೊಟ್ಟಂತಹ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-**11** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**11**(ಎ) ಎಂದು ಗುರುತಿಸಲಾಯಿತು. ಡಬ್ಲು ಪಿಸಿ **-2593** ಇವರು ದೂರನ್ನು ಟೈಪ ಮಾಡಿದ ಬಗ್ಗೆ ನನಗೆ ವರದಿ ಕೊಟ್ಟಿರುತ್ತಾರೆ ಅದನ್ನು ನಿಪಿ-**12** ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**12**(ಎ) ಎಂದು ಗುರುತಿಸಲಾಯಿತು. ಸಿ ಎಚ್ ಸಿ ಎಸ್ ಬಿ ಖೋತ ಇವರು ಕೊಟ್ಟಂತಹ ವರದಿ ನಿಪಿ-**13** ಎಂದು ಸಾಕ್ಷಿಯ ಸಹಿಯನ್ನು ನಿಪಿ-**13**(ಎ) ಎಂದು ಗುರುತಿಸಲಾಯಿತು. ಎಫ್ ಎಸ್ ಎಲ್ ವರದಿ ಯನ್ನು ನಿಪಿ-**14** ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**14**(ಎ) ಎಂದು ಗುರುತಿಸಲಾಯಿತು. ದಿಃ **30-8-2014** ರಂದು ಅಬಕಾರಿ ನೀರಿಕ್ಷಕರು ಹುಕ್ಕೇರಿ ಇವರಿಗೆ ಬರೆದ ಪತ್ರವನ್ನು ನಿಪಿ-**15** ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**15**(ಎ) ಎಂದು ಗುರುತಿಸಲಾಯಿತು. ಹಾಗೂ ಡಿವೈ ಎಸ್ ಪಿ ಬೆಳಗಾವಿ ಇವರಿಗೆ ಬರೆದಂತಹ ದಿಃ **30-8-2014**

ರಂದು ಬರೆದ ಪತ್ರವನ್ನು ನಿಪಿ-16 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಡಿ ವೈ ಎಸ್ ಪಿ ಬೆಳಗಾವಿ ಇವರಿಂದ ಬಂದ ಪತ್ರ ನೋಡುತ್ತಿದ್ದು ಅದು ನಿಪಿ-17 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ. ಐ ವೈ ಜಿ ವಕೀಲರಿಂದ -**

3. ಅಲಾನಿದಳ ಪೊಲೀಸ ಠಾಣೆ ಆ ಸಮಯದಲ್ಲಿ ಗೋಕಾಕನಲ್ಲಿ ಇತ್ತು ಎಂದರೆ ನಿಜ. ಗುನ್ಹಾ ಸ್ಥಳಕ್ಕೆ ನಾನು ಭೇಟಿ ಕೊಟ್ಟಿಲ್ಲ. ಠಾಣೆಯಿಂದ ಗುನ್ಹಾ ಸ್ಥಳ 50 ಕಿಮೀ ದೂರದಲ್ಲಿ ಇದೆ. ಗುನ್ಹಾ ಸ್ಥಳ ಯಮಕನಮರಡಿ ಪೋಲಿಸ ಠಾಣೆ ಹದ್ದಿಗೆ ಬರುತ್ತದೆ ಎಂದರೆ ನಿಜ ಹಾಗೂ ಪಾಶ್ಚಾಪೂರದಲ್ಲಿ ಓ ಪಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ಸ್ಥಳಕ್ಕೆ ಒಬ್ಬ ಬೀಟ ಸತತವಾಗಿ ಪೊಲೀಸ ನೇಮಕ ಆಗಿರುತ್ತಾರೆ ಎಂದರೆ ಸರಿಯಲ್ಲ. 2014 ರಲ್ಲಿ ಸದರಿ ಘಟನಾ ಸ್ಥಳ ಸಂಕೇಶ್ವರ ಅಬಕಾರಿ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುತ್ತಿತ್ತು ಎಂದರೆ ಸರಿ. ನಮ್ಮ ಪೊಲೀಸ ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗಲು 3 ರಸ್ತೆಗಳು ಇದ್ದು, ಚಾಸಾ-1ರವರು ಪಾಶ್ಚಾಪೂರದಿಂದ ರಾಜನಕಟ್ಟಿಗೆ ಹೋಗಿರಬಹುದು. ಆ ಬಗ್ಗೆ ನಾನು ಅವರ ಹೇಳಿಕೆ ಪಡೆದುಕೊಂಡಿಲ್ಲ. ಎಫ್. ಐ ಆರ್ ನಲ್ಲಿ ಜಲಡೈರಿ ಉಲ್ಲೇಖ ಖಾಲಿ ಇದೆ ಎಂದರೆ ನಿಜ. ದಿಃ 18-08-2014 ರಂದು ಪಿ ಎಫ್ ದಿನಾಂಕ ಹಾಗೂ ಸಂಖ್ಯೆ ಬ್ಲಾಂಕ ಇದೆ ಎಂದರೆ ನಿಜ. ಪ್ರತಿಯೊಂದು ಅಬಕಾರಿ ಕೇಸನಲ್ಲಿಯೂ ಸಹ ಖೋತ ಇವರು ಮುದ್ದೇ ಮಾಲು ಹಾಗೂ ಎಂ ಎನ್ ಪೂಜಾರಿ ಇವರು ಪಂಚರನ್ನು ಕರೆದುಕೊಂಡು ಬರುವಕೆಲಸ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಂದುವರೆದು ಅಲಾನಿದಳ ಪೊಲೀಸ ಠಾಣೆಯಲ್ಲಿ ಒಂದೊಂದು ತಾಲೂಕಿನಲ್ಲಿ ಒಂದೊಂದು ಕೆಲಸಕ್ಕೆ ಸಿಬ್ಬಂದಿಯನ್ನು ನೇಮಕ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಕಲಂ 328 ಐ ಪಿ ಸಿ ಯನನ್ನು ಕೈಬಿಟ್ಟ ಬಗ್ಗೆ ಯಾವುದೇ ಸೂಕ್ತ ಕಾರಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಮೊದಲು ಜಾಮೀನು ಸಿಗಬಾರದು ಎಂದು ಕಲಂ 328 ಐ ಪಿ ಸಿ ಯನ್ನು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-4 ,5 ಮತ್ತು 6 ಇವರಿಗೆ ಆರೋಪಿಯನ್ನು ಪತ್ತೆ ಮಾಡಲು ಮೇಮೋ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ಅದನ್ನು ಕೇಸಗೆ ಅನೂಕೂಲವಾಗಲೆಂದು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಠಾಣೆಯಲ್ಲಿ ಇದ್ದಂತಹ ವಿಲೇವಾರಿ ಆಗದ ಮದ್ಯವನ್ನು ಈ ಪ್ರಕರಣಕ್ಕೆ ಅಳವಡಿಸಿದ್ದೇನೆ ಎಂದರೆ ಸರಿಯಲ್ಲ.ಚಾಸಾ-2 ಮತ್ತು 3 ಪಂಚನಾಮೆ ಕಾಲಕ್ಕೆ ಹಾಜರಿರಲಿಲ್ಲ ಅವರು ಅಲ್ಲಿ ಹೋಗಿರಲಿಲ್ಲ

ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಮ್ಮ ಸಿಬ್ಬಂದಿಯವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈರಪ್ಪ ಗಾಳ್ಯಾಗೋಳ ಇವರ ಹೇಳಿಕೆಯನ್ನು ಪಡೆಯುವ ಪ್ರಯತ್ನ ಮಾಡಿಲ್ಲ. ಸ್ಥಳೀಯ ಗ್ರಾಮಸ್ಥರು ಮತ್ತು ಮುಖಂಡರು ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧಿಕಾರಿಗಳು ಈ ಪ್ರಕರಣ ದಾಖಲಾಗುವ ಮುಂಚೆ ನಮಗೆ ದೂರು ಕೊಟ್ಟಿರಲಿಲ್ಲ. ಅಲಾನಿ ದಳ ದಿಂದ ಇಂತಿಷ್ಟು ಕೇಸಗಳನ್ನು ಮಾಡಬೇಕು ಎಂಬ ಒತ್ತಡ ಇರುತ್ತದೆ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿದ್ದು ಕಂಡು ಬರದಿದ್ದರೂ ನಾನು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗೋಸ್ಕರ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**
**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**